ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
Krishna Tunga Campus, Mantralay Road (N.H. 167), Yergera -584133, Raichur, Karnataka
ಶೈಕ್ಷಣಿಕ ವಿಭಾಗ Website: https://raichuruniversity.ac.in

ಸಂ.ಆಶ್ರೀಮವಾವಿರಾ/ಶೈವಿ/2025-26/ 01 ದಿನಾಂಕ:

## ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

ದಿನಾಂಕ: 14.05.2025 ರಂದು ಮುಂಜಾನೆ 09.00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಚೇರಿಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

**ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

1) ಪ್ರೊ. ಸುಯಮೀಂದ್ರ ಕುಲಕರ್ಣಿ, ಕುಲಪತಿಗಳು(ಪ್ರಭಾರ) – ಅಧ್ಯಕ್ಷರು
2) ಪ್ರೊ. ಪಾರ್ವತಿ ಸಿ. ಎಸ್, (ಡೀನರು) – ಸದಸ್ಯರು
3) ಪ್ರೊ. ಪಿ. ಭಾಸ್ಕರ್, (ಡೀನರು) – ಸದಸ್ಯರು
4) ಡಾ. ವೆಂಕಟೇಶ. ಕೆ , (ಡೀನರು) – ಸದಸ್ಯರು
5) ಡಾ. ಲತಾ ಎಂ.ಎಸ್, (ಡೀನರು) – ಸದಸ್ಯರು
6) ಡಾ. ಯಂಕಣ್ಣ – ಸದಸ್ಯರು
7) ಡಾ. ಸಿದ್ದಪ್ಪ – ಸದಸ್ಯರು
8) ಡಾ. ಎಮ್ ವಾರಿಸ್ – ಸದಸ್ಯರು
9) ಶ್ರೀ. ಪರ್ವತರೆಡ್ಡಿ – ಸದಸ್ಯರು
10) ಡಾ. ಚನ್ನಬಸಪ್ಪ ಮೇಟಿ – ಸದಸ್ಯರು
11) ಡಾ. ಈರಣ್ಣ. ಪೂಜಾರಿ – ಸದಸ್ಯರು
12) ಶ್ರೀ. ಸತ್ಯನಾರಾಯಣ – ಸದಸ್ಯರು
13) ಶ್ರೀ. ಅನಿಲಕುಮಾರ ರಾಜಣ್ಣ, – ಸದಸ್ಯರು
14) ಡಾ. ಈರಣ್ಣ. ಜೆ – ಸದಸ್ಯರು
15) ಶ್ರೀ. ಶೇಖಪ್ಪ. ಬಿ. ರ್‍ಯಾಖಾ – ಸದಸ್ಯರು
16) ಡಾ. ಜಿ.ಎಸ್.ಬಿರಾದಾರ, ಗ್ರಂಥಪಾಲಕರು – ಸದಸ್ಯರು
17) ಡಾ. ರಾಘವೇಂದ್ರ ಫತ್ತೇಪೂರು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
18) ಪ್ರೋ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
19) ಡಾ. ಶಂಕರ. ವ್ಹಿ, ಕೆ.ಎ.ಎಸ್ (ಆಯ್ಕೆ ಶ್ರೇಣಿ) ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಕುಲಪತಿಗಳನ್ನು ಹಾಗೂ ನೂತನವಾಗಿ ನೇಮಕಗೊಂಡಿರುವ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಗಳನ್ನು ಅಭಿನಂದಿಸುತ್ತಾ ಎಲ್ಲಾ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳನ್ನು ಸ್ವಾಗತಿಸಿ ಸಭೆ ನಡೆಸಿಕೊಂಡು ಹೋಗಲು ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ ಐಟಂ | ವಿಷಯ | ವಿದ್ಯಾವಿಷಯಕ ಪರಿಷತ್‌ನ ನಿರ್ಣಯ |
|---|---|---|
| 1 | ದಿನಾಂಕ 24.10.2024ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ 24.10.2024ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು. |
| 2 | ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಕಾಲೇಜುಗಳ 2025-26ನೇ ಸಾಲಿನ ಸಂಲಗ್ನತೆ ಕುರಿತು ಚರ್ಚೆ. | 2025-26 ನೇ ಸಾಲಿಗೆ ಸಂಯೋಜನಾ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ 182 ಕಾಲೇಜುಗಳಿಗೆ LIC ತಂಡವು ಭೇಟಿ ನೀಡಿ ಆನ್‌ಲೈನ್ ಪೋರ್ಟಲ್ ದಲ್ಲಿ ವರದಿಯನ್ನು ಸಲ್ಲಿಸಿರುವ ಮಾಹಿತಿಯನ್ನು ಡಾ. ರಾಘವೇಂದ್ರ ಫತ್ತೇಪೂರ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಇವರು ಸಭೆಗೆ ಮಂಡಿಸಿದರು. ಸರ್ಕಾರ ನಿರ್ದೇಶನದ ಪ್ರಕಾರ 45 ಕ್ಕಿಂತ ಕಡಿಮೆ ಸಂಯೋಜನಾ ಅಂಕಗಳನ್ನು ಪಡೆದುಕೊಂಡಿರುವ ಕಾಲೇಜುಗಳ ಸಂಯೋಜನೆ ಮುಂದುವರೆಸಲು ಸರ್ಕಾರದ ನಿಯಮಾನುಸಾರ ಅವಕಾಶವಿರುವುದಿಲ್ಲ ಎಂದು ನಿರ್ದೇಶಕರು ತಿಳಿಸಿದರು. ಈ ಪ್ರಕಾರ ನೋಡಲಾಗಿ 174 ಕಾಲೇಜುಗಳ ಪೈಕಿ 84 ಕಾಲೇಜುಗಳಿಗೆ 2025-26ನೇ ಸಾಲಿನ ಸಂಯೋಜನೆ ಮುಂದುವರೆಸಲು ಅವಕಾಶವಿರುವುದಿಲ್ಲ ಎಂದು ಕುಲಪತಿಗಳು ಮತ್ತು ಕುಲಸಚಿವರು ಸಭೆಗೆ ತಿಳಿಸಿದರು. ಈ ವಿಷಯದ ಕುರಿತು ಸಭೆಯಲ್ಲಿ ವಿಸ್ತೃತ ಚರ್ಚೆಯ ನಂತರ ಹಿಂದುಳಿದ ಪ್ರದೇಶವಾಗಿರುವ ರಾಯಚೂರು ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ 84 ಕಾಲೇಜುಗಳಿಗೆ 2025-26ನೇ ಸಾಲಿನ ಸಂಯೋಜನೆಯನ್ನು ತಡೆಹಿಡಿಯುವುದರಿಂದ ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಸಾವಿರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಸಭೆಯ ಸದಸ್ಯರುಗಳು ತಮ್ಮ |

| | | |
|---|---|---|
| | | ಅಭಿಪ್ರಾಯಗಳನ್ನು ತಿಳಿಸಿದರು. ಮುಂದುವರೆದು ಸಭೆಯಲ್ಲಿ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಯಾವ ರೀತಿ ಮುಂದುವರಿಕೆಯನ್ನು ನೀಡಲಾಗಿತ್ತು ಎಂದು ವಿಚಾರಿಸಲಾಗಿಯು, ಈ ಸಂದರ್ಭದಲ್ಲಿ ಕಳೆದ ಶೈಕ್ಷಣಿಕ ಸಾಲಿಗಾಗಿ ಮಾನ್ಯ ಸರ್ಕಾರದ ನಿರ್ದೇಶನ ಹಾಗೂ ಯು.ಜಿ.ಸಿ ನಿಯಮಾವಳಿಗಳನ್ವಯ ಕನಿಷ್ಟ 45 ಅಂಕಗಳು ಹೊಂದಬೇಕೆಂದು ಕಡ್ಡಾಯಗೊಳಿಸಿದ್ದರು ಸಹ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಭೆಯು 35 ಅಥವಾ ಅದಕ್ಕಿಂತ ಮೇಲ್ಪಟ್ಟ ಸಂಯೋಜನಾ ಅಂಕಗಳನ್ನು ಪಡೆದ ಕಾಲೇಜುಗಳಿಗೆ ಶೋ ಕಾಸ್(Show cause) ನೋಟಿಸನ್ನು ನೀಡಿ ಸಂಯೋಜನೆಯನ್ನು ನೀಡಲಾಗಿರುತ್ತದೆ ಎಂದು ಕಾಲೇಜು ಅಭಿವೃದ್ಧಿ ನಿರ್ದೇಶಕರು ಸಭೆಗೆ ತಿಳಿಸಿದರು.<br>2025–26 ನೇ ಸಾಲಿಗೆ 35 ಕ್ಕಿಂತ ಕಡಿಮೆ ಅಂಕಗಳನ್ನು ತೆಗೆದುಕೊಂಡಿರುವ 26 ಕಾಲೇಜುಗಳ ಸಂಯೋಜನೆ ಮುಂದುವರಿಸಲಾಗುವುದಿಲ್ಲ ಎಂದು ಸಭೆಯು ತೀರ್ಮಾನಿಸಿತು, ಮತ್ತು ಸದರಿ ಕಾಲೇಜು ಮರು ಸಂಯೋಜನಾ ತನಿಖೆಗೆ ಇಚ್ಛಿಸಿದಲ್ಲಿ ವಿಶ್ವವಿದ್ಯಾಲಯದ ನಿಯಮಾನುಸಾರ ಅಗತ್ಯ ಶುಲ್ಕ ಭರಿಸಿದಲ್ಲಿ ಮರು LIC ತನಿಖೆಗೆ ಏರ್ಪಡಿಸುವ ಸಂಬಂಧ ಕ್ರಮ ಕೈಗೊಳ್ಳಲು ಸಭೆ ನಿರ್ಧರಿಸಿತು. ಮುಂದುವರೆದು ಸದರಿ ಸಭೆಯ ನಿರ್ಣಯವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲು ನಿರ್ಣಯಿಸಲಾಯಿತು. |
| 3 | 2025–26ನೇ **ಸಾಲಿನ ಆಯವ್ಯಯ** ಅಂದಾಜು. | ದಿನಾಂಕ 13.05.2025ರಂದು ಹಣಕಾಸು ಸಮಿತಿಯನ್ನು ಆಯೋಜಿಸಿತ್ತು, ಆದರೆ ಸಭೆಯ ಸದಸ್ಯರುಗಳಲ್ಲಿ ಒಬ್ಬರಾದ ಸರ್ಕಾರದ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ಇವರು ಕಾರ್ಯದೊತ್ತಡದ ಕಾರಣದಿಂದ ಈ ಸಭೆಗೆ ಹಾಜರಾಲು ಆಗಿರುವುದಿಲ್ಲ. ಆದುದರಿಂದ ಸಭೆಯನ್ನು ಮುಂದೂಡಲಾಯಿತು. ಮುಂದಿನ ದಿನಗಳಲ್ಲಿ ಹಣಕಾಸು ಸಮಿತಿಯ ಸಭೆಯನ್ನು ಏರ್ಪಡಿಸಲಾಗುವುದು ಎಂದು ಸಭೆಗೆ ಕುಲಸಚಿವರು ತಿಳಿಸಿದರು |
| 4 | ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಚರ್ಚೆ.<br><br>• ನಂದಿನಿ ಶಿಕ್ಷಣ ಮಹಾವಿದ್ಯಾಲಯ ರಾಯಚೂರು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಿಂದ ಪ್ರತಿ ವರ್ಷ ಸಂಯೋಜನೆಯನ್ನು ಪಡೆಯುತ್ತಾ ಬಂದಿದೆ ಆದರೆ ಸದರಿ ಶಿಕ್ಷಣ ಮಹಾವಿದ್ಯಾಲಯಕ್ಕೆ ಅನ್ವಯಿಸುವ NCTE ಮಾನ್ಯತೆ 2017–18ನೇ ಸಾಲಿನಲ್ಲಿ ರದ್ದಾಗಿದ್ದು ಆ ವಿಷಯವನ್ನು ನಂದಿನಿ ಶಿಕ್ಷಣ ಮಹಾವಿದ್ಯಾಲಯವು ವಿಶ್ವವಿದ್ಯಾಲಯಕ್ಕೆ ತಿಳಿಸದೆ ಸಂಯೋಜನೆಯನ್ನು ಪಡೆಯುತ್ತಾ ಬಂದಿದೆ. ಆದರೆ ಈಗ ನಂದಿನಿ ಶಿಕ್ಷಣ ಮಹಾವಿದ್ಯಾಲಯಕ್ಕೆ NCTE ಅನುಮತಿ 2017–18ನೇ ಸಾಲಿನ ಕೊನೆಯಿಂದಲೇ (End of Academic Year 2017-18) ರದ್ದಾಗಿರುವುದು ಎಂದು SRC, NCTE ಯವರೇ ಮಾಹಿತಿ ನೀಡಿರುತ್ತಾರೆ. ಆದ್ದರಿಂದ ನಂದಿನಿ ಶಿಕ್ಷಣ ಮಹಾವಿದ್ಯಾಲಯ, ರಾಂಪುರ, ರಾಯಚೂರು ಇವರ<br><br>(a) 2024-25 ನೇ ಶೈಕ್ಷಣಿಕ ಸಾಲಿನಿಂದ ಸಂಯೋಜನೆಯನ್ನು ಹಿಂಪಡೆದು ರದ್ದುಗೊಳಿಸಲು ಹಾಗೂ ವ್ಯಾಸಂಗ ಮಾಡುತ್ತಿರುವ ಬಿ.ಎಡ್ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳನ್ನು ಬೇರೆ ಶಿಕ್ಷಣ ಮಹಾವಿದ್ಯಾಲಯಗಳಿಗೆ ವರ್ಗಾವಣೆ ಮಾಡಲು ಘಟನೋತ್ತರವಾಗಿ ಅನುಮೋದಿಸುವ ಕುರಿತು. | ನಂದಿನಿ ಶಿಕ್ಷಣ ಮಹಾವಿದ್ಯಾಲಯ ರಾಯಚೂರು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಿಂದ ಪ್ರತಿ ವರ್ಷ ಸಂಯೋಜನೆಯನ್ನು ಪಡೆಯುತ್ತಾ ಬಂದಿದೆ ಆದರೆ ಸದರಿ ಶಿಕ್ಷಣ ಮಹಾವಿದ್ಯಾಲಯಕ್ಕೆ ಅನ್ವಯಿಸುವ NCTE ಮಾನ್ಯತೆ 2017–18ನೇ ಸಾಲಿನಲ್ಲಿ ರದ್ದಾಗಿದ್ದು ಆ ವಿಷಯವನ್ನು ನಂದಿನಿ ಶಿಕ್ಷಣ ಮಹಾವಿದ್ಯಾಲಯವು ವಿಶ್ವವಿದ್ಯಾಲಯಕ್ಕೆ ತಿಳಿಸದೆ ಸಂಯೋಜನೆಯನ್ನು ಪಡೆಯುತ್ತಾ ಬಂದಿದೆ. ಆದರೆ ಈಗ ನಂದಿನಿ ಶಿಕ್ಷಣ ಮಹಾವಿದ್ಯಾಲಯಕ್ಕೆ NCTE ಅನುಮತಿ 2017–18ನೇ ಸಾಲಿನ ಕೊನೆಯಿಂದಲೇ (End of Academic Year 2017-18) ರದ್ದಾಗಿರುವುದು ಎಂದು SRC, NCTE ಯವರೇ ಮಾಹಿತಿ ನೀಡಿರುತ್ತಾರೆ. ಆದ್ದರಿಂದ ನಂದಿನಿ ಶಿಕ್ಷಣ ಮಹಾವಿದ್ಯಾಲಯ, ರಾಂಪುರ, ರಾಯಚೂರು ಇವರ 2024-25 ನೇ ಶೈಕ್ಷಣಿಕ ಸಾಲಿನಿಂದ ಸಂಯೋಜನೆಯನ್ನು ಹಿಂಪಡೆದು ರದ್ದುಗೊಳಿಸಲು ಅನುಮೋದಿಸಲಾಯಿತು.<br><br>(a) 2024-25 ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಿ.ಎಡ್ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳನ್ನು ಬೇರೆ ಶಿಕ್ಷಣ ಮಹಾವಿದ್ಯಾಲಯಗಳಿಗೆ ವರ್ಗಾವಣೆ ಮಾಡಲು ಅಥವಾ ಅದೇ ಕಾಲೇಜಿನಲ್ಲಿ ಮುಂದುವರಿಸಬೇಕೆ ಎನ್ನುವ ಬಗ್ಗೆ NCTEರವರ ತರ್ತು ನಿರ್ದೇಶನ ಕೋರುವುದು ಮತ್ತು ಅವರಿಂದ ಬರುವ ನಿರ್ದೇಶನದಂತೆ ಮುಂದುವರೆಯಲು ಸಭೆಯು ಅನುಮೋದಿಸಲಾಯಿತು. |

| | |
|---|---|
| (b) ಅಲ್ಲದೇ 2018-19ನೇ ಸಾಲಿನ ನಂತರದಿಂದ NCTE ಇರದ ಹಿನ್ನಲೆಯಲ್ಲಿ 2021-22, 2022-23, 2023-24ನೇ ಶೈಕ್ಷಣಿಕ ವರ್ಷಗಳಲ್ಲಿ ಸದರಿ ಮಹಾವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಏನು ಕ್ರಮ ಕೈಗೊಳ್ಳಬೇಕು ಮತ್ತು ತಪ್ಪು ಮಾಹಿತಿ ನೀಡಿದ ಮಹಾವಿದ್ಯಾಲಯದ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳುವ ಕುರಿತು ಚರ್ಚಿಸುವುದು. | (b) ಸದರಿ ವಿಷಯದ ಬಗ್ಗೆ NCTE ಪತ್ರವನ್ನು ಬರೆದು NCTE ನಿರ್ದೇಶನದನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| • 2025-26ನೇ ಸಾಲಿಗೆ ಒಟ್ಟು 182 ಮಹಾವಿದ್ಯಾಲಯಗಳು ಅರ್ಜಿ ಸಲ್ಲಿಸಿದ್ದು, 181 ಮಹಾವಿದ್ಯಾಲಯಗಳಿಗೆ LIC ತನಿಖಾ ತಂಡಗಳ ಬೇಟಿ ನೀಡಿ ವಿಶ್ವವಿದ್ಯಾಲಯಕ್ಕೆ UUCMS ತಂತ್ರಾಂಶದ ಮುಂಖಾತರ ಸಂಯೋಜನಾ ವರದಿಯನ್ನು ಸಲ್ಲಿಸಿದ್ದವು. ಕುಲಸಚಿವರ ನೇತೃತ್ವದ ತಂಡ 22-23 ಅಕ್ಟೋಬರ್ 2024 ರಂದು ರಾಯಚೂರು (06) ಮತ್ತು ಯಾದಗಿರಿ (05) ಜಿಲ್ಲೆಗಳ ಒಟ್ಟು 11 ಮಹಾವಿದ್ಯಾಲಯಗಳಿಗೆ ಅನಿರೀಕ್ಷಿತವಾಗಿ ಬೇಟಿ ನೀಡಿದ ಮಹಾವಿದ್ಯಾಲಯಗಳ ಜೊತೆಗೆ ಅನೇಕ ಮಹಾವಿದ್ಯಾಲಯಗಳ ಸಂಯೋಜನಾ ಅರ್ಜಿಯನ್ನು ತಪ್ಪಾದ ಮಾಹಿತಿ ನಮೂದು ಆಗಿರುವುದು ಕಂಡು ಬಂದಿತ್ತು. ಮಹಾವಿದ್ಯಾಲಯಗಳ ಸ್ಥಾನಿಕ ವಿಚಾರಣೆ ಸಮರ್ಪಕ ರೀತಿಯಲ್ಲಿ, ದೊಷರಹಿತವಾಗಿ ಆಗಬೇಕು ಮತ್ತು ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ಗುಣಾತ್ಮಕ ಬದಲಾವಣೆ ತರಬೇಕಾಗದ ಹಿನ್ನಲೆಯಲ್ಲಿ 126 ಮಹಾವಿದ್ಯಾಲಯಗಳಿಗೆ ಪುನರ್ ಮೌಲ್ಯಮಾಪನ (ಪರಿಶೀಲನೆ) ಮಾಡಲಾಯಿತು ಮತ್ತು LIC ತಂಡಗಳಿಂದ Revaluation ವರದಿ ಪಡೆಯಲಾಗಿದೆ. ಈ ಮಹಾವಿದ್ಯಾಲಯಗಳ ಪುನರ್ ಮೌಲ್ಯಮಾಪನ (Revaluation) ವರದಿಗೆ ಘಟನೋತ್ತರ ಅನುಮೋದಿಸುವ ಕುರಿತು. | • ಸಭೆಯು ಈ ಮಹಾವಿದ್ಯಾಲಯಗಳ ಪುನರ್ ಪರಿಶೀಲನೆ (Revaluation) ಘಟನೋತ್ತರ ಅನುಮೋದನೆಯನ್ನು ನೀಡಿತು. |
| • 2025-26ನೇ ಸಾಲಿನ ಸಂಯೋಜನಾ ಮುಂದುವರಿಕೆ/ ಪ್ರವೇಶ ಮೀತಿ ಹೆಚ್ಚಳಕ್ಕಾಗಿ ಅರ್ಜಿ ಸಲ್ಲಿಸಿದ 175 ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ UUCMS ತಂತ್ರಾಂಶ ನೀಡಿದ Academic Scoreನ ವಿವರವನ್ನು ಪರಿಶೀಲಿಸಿ ಅನುಮೋದಿಸುವ ಕುರಿತು. | • 2025-26ನೇ ಸಾಲಿನ ಸಂಯೋಜನಾ ಮುಂದುವರಿಕೆ/ ಪ್ರವೇಶ ಮೀತಿ ಹೆಚ್ಚಳಕ್ಕಾಗಿ ಅರ್ಜಿ ಸಲ್ಲಿಸಿದ 175 ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ UUCMS ತಂತ್ರಾಂಶ ನೀಡಿದ Academic Scoreನ ವಿವರವನ್ನು ಅನುಮೋದಿಸಲಾಯಿತು. |
| • 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಅಧ್ಯಯನ ಮಂಡಳಿ (BOS) ಸಮಿತಿಗಳನ್ನು ರಚಿಸುವ ಕುರಿತು. | • 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಅಧ್ಯಯನ ಮಂಡಳಿ (BOS) ಸಮಿತಿಗಳನ್ನು ರಚಿಸಲು ಚರ್ಚಿಸಿ ಅನುಮೋದಿಸಲಾಯಿತು. |
| • 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿ ಅಧಿಸೂಚನೆ ಹೊರಡಿಸುವ ಕುರಿತು. | • 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿ ಅಧಿಸೂಚನೆಯನ್ನು ಹೊರಡಿಸಲು ಚರ್ಚಿಸಿ ಅನುಮೋದಿಸಲಾಯಿತು. |

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

**ADIKAVI SRI MAHARSHI VALMIKI UNIVERSITY, RAICHUR**

Krishna Tunga Campus, Mantralay Road (N.H. 167), Yergera -584133, Raichur, Karnataka

**ಶೈಕ್ಷಣಿಕ ವಿಭಾಗ** Website: https://raichuruniversity.ac.in

| | | |
|---|---|---|
| "A" | • ನಮ್ಮ ವಿಶ್ವವಿದ್ಯಾಲಯದ ವತಿಯಿಂದ ಸುಮಾರು 32 ಬೇರೆ ಬೇರೆ ಜಿಲ್ಲೆಗಳ ಸಹಕಾರ ಸಂಘಗಳ ಸಿಬ್ಬಂಧಿ ನೇಮಕಾತಿಗಾಗಿ ಪರೀಕ್ಷೆಗಳನ್ನು ನಡೆಸಿದ್ದು ಅವುಗಳ ಪರಿಕ್ಷಾಂಗ ವಿಭಾಗದಿಂದ ಜರುಗಿಸಿಲ್ಲ. ಅಲ್ಲದೇ ಇದರ ಬಗ್ಗೆ ನಮ್ಮ ವಿಶ್ವವಿದ್ಯಾಲಯದಲ್ಲಿ ಯಾವುದೇ ಮಾಹಿತಿ ಇಲ್ಲ. ಅಲ್ಲದೇ ಇದಕ್ಕಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆಗೆದಿದ್ದು 2022–23 ಹಾಗೂ 2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲೂ ಸಹ ಇದನ್ನು ತೆಗೆದುಕೊಂಡಿಲ್ಲ ನ್ಯಾಯಾಂಗ ತನಿಖೆಯಾಗಬೇಕು. | • ನಮ್ಮ ವಿಶ್ವವಿದ್ಯಾಲಯದ ವತಿಯಿಂದ ಸುಮಾರು 32 ಬೇರೆ ಬೇರೆ ಜಿಲ್ಲೆಗಳ ಸಹಕಾರ ಸಂಘಗಳ ಸಿಬ್ಬಂಧಿ ನೇಮಕಾತಿಗಾಗಿ ಪರೀಕ್ಷೆಗಳನ್ನು ನಡೆಸಿದ್ದು ಅವುಗಳ ಪರಿಕ್ಷಾಂಗ ವಿಭಾಗದಿಂದ ಜರುಗಿಸಿಲ್ಲ. ಅಲ್ಲದೇ ಇದರ ಬಗ್ಗೆ ನಮ್ಮ ವಿಶ್ವವಿದ್ಯಾಲಯದಲ್ಲಿ ಯಾವುದೇ ಮಾಹಿತಿ ಇಲ್ಲ. ಅಲ್ಲದೇ ಇದಕ್ಕಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆಗೆದಿದ್ದು 2022–23 ಹಾಗೂ 2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲೂ ಸಹ ಇದನ್ನು ತೆಗೆದುಕೊಂಡಿಲ್ಲ ಎಂದು ಸಭೆಗೆ ಕುಲಸಚಿವರು ತಿಳಿಸಿದರು. ಸಭೆಯು ಈ ವಿಷಯವಾಗಿ ಚರ್ಚಿಸಿ ನಿವೃತ್ತ ಜಿಲ್ಲಾ ನ್ಯಾಯಧೀಶರಿಂದ ಸ್ವತಂತ್ರ ನ್ಯಾಯಾಂಗ ತನಿಖೆ ಮಾಡಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. |
| "B" | • 2025–26ನೇ ಸಾಲಿಗಾಗಿ ಪಿಎಚ್.ಡಿ ನೋಟಿಫಿಕೇಶನ್ ಅನ್ನು ನಿಯಮ ಬಾಹೀರವಾಗಿ ಮಾಡಿದ್ದಕ್ಕಾಗಿ ಹಿಂದಿನ ಕುಲಸಚಿವರು(ಮೌಲ್ಯಮಾಪನ)ರ ವಿರುದ್ಧ ಶಿಸ್ತು ಕ್ರಮಕ್ಕಾಗಿ ತಿರ್ಮಾನಿಸುವುದು. | • 2025–26ನೇ ಸಾಲಿಗಾಗಿ ಪಿಎಚ್.ಡಿ ನೋಟಿಫಿಕೇಶನ್ ಅನ್ನು ನಿಯಮ ಬಾಹೀರವಾಗಿ ಮಾಡಿದ್ದಕ್ಕಾಗಿ ಹಿಂದಿನ ಕುಲಸಚಿವರು(ಮೌಲ್ಯಮಾಪನ)ರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಂಬಂಧ ಸಭೆಗೆ ಕುಲಸಚಿವರು ತಿಳಿಸಿದರು. ಸಭೆಯು ಈ ವಿಷಯವಾಗಿ ಚರ್ಚಿಸಿ ವಿಶ್ವವಿದ್ಯಾಲಯದ ನಿಯಮಾವಳಿಗಳು ಹಾಗೂ ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳನ್ವಯ (KCSR & CCA) ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

[signature] 28/5/25

| | |
|---|---|
| **ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿಗಳು** | **ಕುಲಪತಿಗಳು ಮತ್ತು ಅಧ್ಯಕ್ಷರು** |
| ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು |

ದಿನಾಂಕ 14 ರಂದು ನಡೆದ ವಿದ್ಯಾವಿಷಯಕ ಸಭೆಯಲ್ಲಿ ಮೇಲೆ ನಮೂದಿಸಿದ "A" ಮತ್ತು "B" ಅಧ್ಯಕ್ಷರ ಅನುಮತಿ ಇಲ್ಲದೆ ಪ್ರಸ್ತಾಪಿಸಿದ್ದು, ಈ ವಿಷಯದಲ್ಲಿ ಯಾವುದೇ ತೀರ್ಮಾನ ಆಗಿರುವುದಿಲ್ಲ. ಆದ್ದರಿಂದ "A" ಮತ್ತು "B" ಹೊರತುಪಡಿಸಿ ಅನುಮೋದಿಸಿದೆ

[signature] 28/5/25